ಮೆಣಸಿನ ಕಾಯಿ, ಹತ್ತಿಗೆ ವೈಜ್ಞಾನಿಕ ಬೆಂಬಲ ಬೆಲೆ ನೀಡಿ, ಮೆಣಸಿನ ಕಾಯಿ ಖರಿದಿ ಕೇಂದ್ರವನ್ನು ಪ್ರಾರಂಭಿಸಲು ಆಗ್ರಹ

ಬಳ್ಳಾರಿ ಆ–ಬಳ್ಳಾರಿ ನಗರದರೈಲ್ವೆ ನಿಲ್ದಾಣದ ಹತ್ತಿರ ಪ್ರತಿಭಟನೆ ನಡೆಸಿ ನಂತರರ್‍ಯಾಲಿಯ ಮೂಲಕ ಜಿಲ್ಲಾಧಿಕಾರಿಗಳ ಕಛೇರಿಗೆ ತೆರಳಿ ಮಾನ್ಯ ಜಿಲ್ಲಾಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಸಲಾಯಿತು. ಈ ಪ್ರತಿಭಟನೆ ಸಭೆಯಅಧ್ಯಕ್ಷತೆ ವಹಿಸಿದ ಇ.ಹನುಮಂತಪ್ಪಆರ್.ಕೆ.ಎಸ್.(ರೈತ–ಕೃಷಿಕಾರ್ಮಿಕ ಸಂಘಟನೆ)ನ ಜಿಲ್ಲಾ ಕಾರ್ಯದರ್ಶಿ ಮಾತಾನಾಡುತ್ತಾ 9 ಆಗಸ್ಟ್ 1942 “ಬ್ರಿಟೀಷರೇ ಭಾರತ ಬಿಟ್ಟುತೊಲಗಿ” ಎಂದು ಹೇಳಿದಂತೆ ರೈತರು 10 ಆಗಸ್ಟ್ 2020 ರಂದು “ಕಾರ್ಪೋರೇಟ್ ಕಂಪನಿಗಳೇ ಬೇಸಾಯ ಬಿಟ್ಟುತೊಲಗಿ” ಎಂದು ಹೇಳುವ ದಿನವನ್ನಾಗಿ ಆಚರಿಸುತ್ತಿದ್ದೇವೆ ಎಂಬುದನ್ನು ತಮ್ಮಗಮನಕ್ಕೆ ತರಲು ಬಯಸುತ್ತೇನೆ. ಭಾರತದರೈತರಾದ ನಾವು, ನಮ್ಮ ಸಮಸ್ಯೆಗಳನ್ನು ಆಲಿಸಲು ಮತ್ತು ಬಗೆಹರಿಸಲುತುರ್ತು ಕ್ರಮಗಳನ್ನು ಕೈಗೊಳ್ಳಬೇಕೆಂದು ಇನ್ನೂರಐವತ್ತಕ್ಕೂ ಹೆಚ್ಚಿನರೈತ ಮತ್ತು ಕೃಷಿ ಕೂಲಿಕಾರರ ಸಂಘಟನೆಗಳ ವೇದಿಕೆಯಾದಂ **IKSCC** ‘ಅಖಿಲಭಾರತರೈತಸಂಘರ್ಷ ಸಮನ್ವಯ ಸಮಿತಿ’ಯ ಮೂಲಕ ಭಾರತ ಸರ್ಕಾರವನ್ನು ಕೇಳಿಕೊಳ್ಳುತ್ತಿದ್ದೇವೆ. ಮೆಣಸಿನ ಕಾಯಿ, ಹತ್ತಿಗೆ ವೈಜ್ಞಾನಿಕ ಬೆಂಬಲ ಬೆಲೆ ನೀಡಿ, ಮೆಣಸಿನ ಕಾಯಿ ಖರಿದಿ ಕೇಂದ್ರವನ್ನು ಪ್ರಾರಂಭಿಸಿ.ರೈತರು ಬೆಳೆದ ಮೆಣಸಿನಕಾ ಯಿಯನ್ನು ಕೋಲ್ಡ್ ಸ್ಟೋರೇಜ್ ನಲ್ಲಿಇಟ್ಟಿದ್ದಾರೆ, ಇದರ ವೆಚ್ಚವನ್ನು ಸರ್ಕಾರವೇ ಭರಿಸಬೇಕೆಂದು ಅಗ್ರಹಿಸಿದರು.

ಕರ್ನಾಟಕ ಪ್ರಾಂತರೈತ ಸಂಘದಜಿಲ್ಲಾ ಕಾರ್ಯದರ್ಶಿಗಳಾದ ವಿ.ಎಸ್.ಶಿವಶಂಕರ್ ಬಾಷಣಕಾರಾಗಿ ಮಾತಾನಾಡುತ್ತಾಅನೇಕ ವರ್ಷಗಳಿಂದ, ನಾವು ಈ ಸಮಸ್ಯೆಗಳ ಬಗ್ಗೆ ಧ್ವನಿ ಎತ್ತಿದ್ದೇವೆ. ಮತ್ತು ನಿಮ್ಮ ಸರ್ಕಾರದ ಗಮನಕ್ಕೂತಂದಿದ್ದೇವೆ. ಇದರ ನಡುವೆಯೂ, ದೇಶದ ಕಣಜಗಳಲ್ಲಿ ದವಸಧಾನ್ಯಗಳು ತುಂಬಿ ತುಳುಕುವಂತೆ ಮಾಡಲು ಮತ್ತುಯಾರೂ ಉಪವಾಸ ಬೀಳದಂತೆ ಖಾತ್ರಿ ಮಾಡಲುತುಂಬಾ ಶ್ರಮಿಸಿದ್ದೇವೆ.ಕೋವಿಡ್ 19 ಸಾಂಕ್ರಮಿಕರೋಗ ವ್ಯಾಪಿಸಲು ಆರಂಭಿಸಿದಾಗಲೂ ನಮ್ಮಕಾಯಕವನ್ನು ಮುಂದುವರೆಸಿದ್ದೇವೆ. ಮತ್ತುಇಂತ ಹಬಿಕ್ಕಟ್ಟಿನ ಸಂದರ್ಭದಲ್ಲಿಯೂಆಹಾರದ ಸಂಗ್ರಹಣೆಯನ್ನು ಖಾತ್ರಿಪಡಿಸಿದ್ದೇವೆ.ಈ ಹಿನ್ನೆಲೆಯಲ್ಲಿಜನಸಂಖ್ಯೆಯಅರ್ಧದಷ್ಟಿರುವದೇಶದ ಶ್ರಮಜೀವಿ ರೈತರು ಮತ್ತು ಭೂರಹಿತರ ಸಮಸ್ಯೆಗಳನ್ನು ಬಗೆಹರಿಸಲು ಅಗತ್ಯಕ್ರಮಗಳನ್ನುತಮ್ಮ ಸರ್ಕಾರತೆಗೆದುಕೊಂಡುಅವರುಮತ್ತಷ್ಟು ತೊಂದರೆಗೆಈಡಾಗದಂತೆ ನೋಡಿಕೊಳ್ಳುತ್ತದೆ ಎಂದುಭಾವಿಸಿತ್ತಿದ್ದೇನೆ. ಹೊರಡಿಸಿರುವ ರೈತ ವಿರೋಧಿ ಸುಗ್ರೀವಾಜ್ಞೆಗ್ಳನ್ನು ರದ್ದುಗೊಳಿಸಿ : 05.06.2020 ರಂದುಕೇಂದ್ರ ಸರ್ಕಾರ ಹೊರಡಿಸಿರುವಎಲ್ಲಾ ಮೂರು ಸುಗ್ರಿವಾಜ್ಞೆಗ್ಗಳಾದ 1) ಕೃಷಿ ಉತ್ಪನ್ನ ವಾಣಿಜ್ಯ ಮತ್ತು ಮಾರಾಟ (ಉತ್ತೇಜನ ಹಾಗೂ ಬೆಂಬಲ) ಸುಗ್ರೀವಾಜ್ಞೆ 2020, 2) ಬೆಲೆ ಭರವಸೆ(ಸಶಕ್ತೀಕರಣ ಹಾಗೂ ಸುರಕ್ಷೆ) ಮತ್ತು ಕೃಷಿ ಸೇವೆಗಳ ಕುರಿತಒಪ್ಪಂದ ಸುಗ್ರೀವಾಜ್ಞೆ 2020, 3)ಅಗತ್ಯ ವಸ್ತುಗಳ ಕಾಯ್ದೆ (ತಿದ್ದುಪಡಿ) 2020 ಎಂಬ ಈ ಕಾಯ್ದೆಗಳನ್ನು ಕೂಡಲೇ ಹಿಂಪಡೆಯಬೇಕು. ಈ ಸುಗ್ರೀವಾಜ್ಞೆಗ್ಗಳುಅಪ್ರಜಾಸತ್ತಾತ್ಮಕ ಮತ್ತು ಇವುಗಳನ್ನು ಕೋವಿಡ್ 19 ರ ನೆರಳಿನಲ್ಲಿ ಹಾಗೂ ದೇಶ ಲಾಕ್‌ಡೌನ್‌ನಲ್ಲಿರುವಾಗ ಜಾರಿಗೊಳಿಸಲಾಗಿದೆ.ಇವು ರೈತ ವಿರೋಧಿ ಮತ್ತು ಇವುಗಳು ಬೆಳೆಗಳ ದರಗಳನ್ನು ಇಳಿಸುತ್ತವೆ. ಇವು ಗ್ರಾಹಕರಿಗೆಆಹಾರದ ಬೆಲೆಗಳನ್ನು ಸಹ ಹೆಚ್ಚು ಮಾಡುತ್ತವೆ. ಕೃಷಿ ವೆಚ್ಚಗಳನ್ನು ದುಬಾರಿಗೊಳಿಸಿ ಬೀಜ ಸಂರಕ್ಷಣೆಯನ್ನುನಾಶಪಡಿಸುತ್ತದೆ.ಆಹಾರ ಭದ್ರತೆ ಹಾಗೂ ಸರ್ಕಾರದ ಮದ್ಯಪ್ರವೇಶದಸಾಧ್ಯತೆಯನ್ನು ಕೊನೆಗೊಳಿಸುತ್ತದೆ.ಇವುಒಟ್ಟಾರೆಯಾಗಿಕಾರ್ಪೋರೇಟ್ ವಲಯವನ್ನುಉತ್ತೇಜಿಸಲಿದ್ದುಆಹಾರ ಪೂರೈಕೆ, ದಾಸ್ತಾನು ಹಾಗೂ ಕಾಳಸಂತೆಮಾರುಕಟ್ಟೆಯನ್ನುಕಾರ್ಪೋರೇಟ್ ಸಂಸ್ಥೆಗಳ ನಿಯಂತ್ರಣಕ್ಕೆ ಒಳಪಡಿಸಲಿವೆ. ‘ಒಂದುದೇಶಒಂದು ಮಾರುಕಟ್ಟೆರೈತರಿಗೆಬೇಡ’, ‘ಒಂದುದೇಶಒಂದು ಕನಿಷ್ಠ ಬೆಂಬಲ ಬೆಲೆ (MSP) ರೈತರಿಗೆ ಬೇಕಾಗಿದೆ’.ಕರ್ನಾಟಕರಾಜ್ಯರೈತ ಸಂಘ ಹಾಗೂ ಹಸಿರುಸೇನೆಯರಾಜ್ಯ ಕಾರ್ಯಧ್ಯಕ್ಷರುಗಳಾದ ಆರ್. ಮಾಧವರೆಡ್ಡಿಈ ವರ್ಷ ನಷ್ಟಕ್ಕೀಡಾದರೈತರಿಗೆ ಪರಿಹಾರಒದಗಿಸಿ :ಆಲಿಕಲ್ಲು ಮಳೆ, ಅಕಾಲಿಕ ಮಳೆ ಮತ್ತು 2020 ಫೆಬ್ರುವರಿ–ಮಾರ್ಚ್‌ನಲ್ಲಿಆದ ಲಾಕ್‌ಡೌನ್‌ಕಾರಣದಿಂದತರಕಾರಿ, ಹಣ್ಣು, ಹಾಲು ಮುಂತಾದ ಬೆಳೆ ನಷ್ಟಕ್ಕೀಡಾದರೈತರಿಗೆ ನಿಮ್ಮ ಸರ್ಕಾರ ಸಂಪೂರ್ಣ ಪರಿಹಾರಗಳನ್ನು ಒದಗಿಸಬೇಕೆಂದು ಅಗ್ರಹಿಸಿದರು.ಕರ್ನಾಟಕರಾಜ್ಯರೈತ ಸಂಘ–(ಪುಟ್ಟಣ್ಣಯ್ಯ ಬಣ)ದ, ಜಿಲ್ಲಾ ಗೌರವಧ್ಯಕ್ಷರುಗಳಾದ ಸಂಗನಕಲ್ಲುಕ್ರಿಷ್ಣ ಮಾತಾನಾಡುತ್ತಾ**MGNREGA**ಅಡಿಯಲ್ಲಿ ಕೆಲಸದ ದಿನಗಳನ್ನು ಹೆಚ್ಚಿಸಿ : ಒಉಒಖಇಉಂಯೋಜನೆಯಅಡಿಯಲ್ಲಿ ಕೆಲಸದ ದಿನಗಳನ್ನು ಕನಿಷ್ಠ 200 ಕ್ಕೆಹೆಚ್ಚಿಸಿ. ಇವತ್ತಿನಬಿಕ್ಕಟ್ಟಿನಸನ್ನಿವೇಶದಲ್ಲಿ ಕೃಷಿಕೂಲಿಕಾರರು, ಸಣ್ಣರೈತರು, ಹಳ್ಳಿಗಳಿಗೆಮರಳಿ ಬಂದಿರುವ ವಲಸೆ ರೈತರುಗಳು ಕೆಲಸ ಪಡೆಯುವಂತಾಗಲೂ**MGNREGA**ಕೆಲಸವನ್ನು ಹೆಚ್ಚಿಸಿ, ಕನಿಷ್ಠ ಕೂಲಿದರದಆಧಾರದಲ್ಲಿ ಕೂಲಿ ಪಾವತಿಸಿಬೇಕೆಂದು ತಿಳಿಸಿದರು. ಕರ್ನಾಟಕಜನಶಕ್ತಿಕೇಂದ್ರಸಮಿತಿ ಸದ್ಯಸ್ಯರುಗಳಾದಕರಿಯಪ್ಪಗುಡಿಮನೆ ರೈತರ ಹಾಗೂ ಆದಿವಾಸಿಗಳ ಕೃಷಿ ಭೂಮಿಗಳ ಕಂಪನಿ ಸ್ವಾಧೀನ ನಿಷೇದಿಸಿ: ಅಂಕಾನೂನು ಹೆಸರಿನಲ್ಲಿಅರಣ್ಯ ಭೂಮಿಯಲ್ಲಿ ಬಲವಂತದ ಸಸಿ ನೆಡುವ ಕೆಲಸ ನಿಲ್ಲಿಸಿ. ಬಗರ್‌ಹುಕುಂ ಸಾಗುವಳಿ ಸಕ್ರಮಗೊಳಿಸಿ. ಉಳುವವನಿಗೆ ಭೂಮಿಎನ್ನುವಧೋರಣೆಗೆ ವಿರುದ್ಧವಾಗಿ ಉಳ್ಳವನಿಗೆ ಭೂಮಿಎನ್ನುವ ನೀತಿಯಂತೆ ಬಂಡವಾಳಗಾರರು ಮತ್ತುಕಾರ್ಪೋರೇಟ್ ಕಂಪನಿಗಳಿಗೆ ಕೃಷಿ ಭೂಮಿಒಪ್ಪಿಸಲುತಂದಿರುವ ಭೂಸುಧಾರಣಾಕಾಯ್ದೆ ತಿದ್ದುಪಡಿಗಳನ್ನು ಕೈಬಿಡಬೇಕು ಹಾಗೂ ಗುತ್ತಿಗೆ ಸರ್ಕಾರಿ ಭೂಮಿಯನ್ನುಖಾಸಗೀಯವರಿಗೆಖಾಯಂ ವರ್ಗಾಯಿಸುವಕರ್ನಾಟಕರಾಜ್ಯ ಸರ್ಕಾರದತೀರ್ಮಾನಕ್ಕೈಬಿಡಬೇಕೆಂದು ಅಗ್ರಹಿಸಿದರು.

ಈ ಪ್ರತಿಭಟನೆಯಲ್ಲಿರೈತ ಸಂಘಟನೆಗಳ ಮುಖಂಡರುಗಳಾದ ಬಸಣ್ಣ, ಪಂಪಾಪತಿ,ಹುಲುಗಯ್ಯ, ಗೋವಿಂದಪ್ಪ, ಆನಂದಪ್ಪ, ಕಾಳಪ್ಪ ಇನ್ನಿತರರು ಭಾಗವಹಿಸಿದ್ದರು.

ಗದಗ ಜಿಲ್ಲೆಯ ಕೋವಿಡ್–19 ಸೋಂಕು ನಿಯಂತ್ರಣ 42 ಕಂಟೇನ್‌ಮೆಂಟ್ ಪ್ರದೇಶಗಳ ನಿರ್ಬಂಧ ತೆರವು

ಗದಗ.ಅಗಸ್ಟ–:ಗದಗ ಜಿಲ್ಲೆಯ ಕೊವಿಡ್–19 ಸೋಂಕು ನಿಯಂತ್ರಣಕ್ಕಾಗಿ ಸೋಂಕಿನ ಸಕಾರಾತ್ಮಕ ಪ್ರಕರಣಗಳು ವರದಿಯಾದ ಕೆಳಕಂಡ 42 ಪ್ರದೇಶಗಳನ್ನು ನಿರ್ಬಂಧಿತ ಪ್ರದೇಶಗಳೆಂದು ಘೋಷಿಸಲಾಗಿತ್ತು.

ಗದಗ–ಬೆಟಗೇರಿ ನಗರ ಸಭೆ ವ್ಯಾಪ್ತಿಯ ವಾರ್ಡ ನಂ 10, ಗಂಗಿಮಡಿ ವಾರ್ಡ ನಂ.22, ಜನತಾ ಕಾಲನಿ ಖಾನತೋಟ ವಾರ್ಡ ನಂ.20, ರೆಹಮತ ನಗರ ವಾರ್ಡ ನಂ.16, ವಿ.ಎನ್.ಟಿ ರಸ್ತೆ ವಾರ್ಡ ನಂ.25, ಕಾಗದಗೇರಿ ಓಣಿ ವಾರ್ಡ ನಂ.25, ಬಸವೇಶ್ವರ ರಸ್ತೆ ವಾರ್ಡ ನಂ. 17, ಹಮಾಲರ ಪ್ಲಾಟ ರಾಜೀವ ಗಾಂಧೀ ನಗರ ವಾರ್ಡ ನಂ.29, ಎಸ್.ಎಂ.ಕೆ.ನಗರ ವಾರ್ಡ ನಂ. 2, ನಂದೀಶ್ವರ ನಗರ ವಾರ್ಡ ನಂ.35, ಮಕಾನ ಗಲ್ಲಿ ವಾರ್ಡ ನಂ.30, ರಾಜೀವ ಗಾಂಧೀ ನಗರ ವಾರ್ಡ ನಂ.29, ಶಿವಾಜಿ ನಗರ ವಾರ್ಡ ನಂ6, ಸೋಮೇಶ್ವರ ರಸ್ತೆ ವಾರ್ಡ ನಂ.19, ಈಶ್ವರ ಬಡಾವಣೆ ವಾರ್ಡ ನಂ 29, ಅಶೋಕ ರಸ್ತೆ ವಾರ್ಡ ನಂ.11, ಸಿದ್ದಲಿಂಗ ನಗರ ಹುಡ್ಕೋ ಕಾಲನಿ 2ನೇ ಕ್ರಾಸ ವಾರ್ಡ ನಂ.34, ಹನುಮಾನ ನಗರ ವಾರ್ಡ ನಂ.33, ಅಮರೇಶ್ವರ ನಗರ ವಾರ್ಡ ನಂ.33,ಮಂಜುನಾಥ ನಗರ 4ನೇ ನಂ ಸ್ಕೂಲ ಹತ್ತಿರ ವಾರ್ಡ ನಂ.4,ಗದಗ ತಾಲೂಕಿನ ಕಣವಿ ವಾರ್ಡ ನಂ.1,ಕುರ್ತಕೋಟಿ ಬಸವೇಶ್ವರ ದೇವಸ್ಥಾನದ ಹತ್ತಿರ ವಾರ್ಡ ನಂ.6, ವಾರ್ಡ ನಂ.7, ಹುಲ್ಲೋಟಿ ವಾರ್ಡ ನಂ.8, ಮಲ್ಲಸಮುದ್ರ ಪೋಲಿಸ ಕ್ವಾಟರ್ಸ ವಾರ್ಡ ನಂ.2, ಲಕ್ಷ್ಮೇಶ್ವರ ಪಟ್ಟಣದ ಸೋಮೇಶ್ವರ ನಗರ ವಾರ್ಡ ನಂ.16, ಮಾರುಕಟ್ಟೆ ರಸ್ತೆ ಪಾದಗಟ್ಟಿ ವಾರ್ಡ ನಂ.14, ಗೌಡರ ಓಣಿ ವಾರ್ಡ ನಂ.6, ಗೌಡರ ಓಣಿ ವಾರ್ಡ ನಂ.19, ಕೆ.ಎಸ್.ಆರ್.ಟಿ.ಸಿ.ಡಿಪೋ ವಾರ್ಡ ನಂ.16, ಲಕ್ಷ್ಮೇಶ್ವರ ತಾಲೂಕು ಶಿಗ್ಲಿ.ನರಗುಂದ ಪಟ್ಟಣದ ಅಧ್ಯಾಪಕ ನಗರ ವಾರ್ಡ ನಂ.22, ಗಾಡಿ ಓಣಿ ವಾರ್ಡ ನಂ.6, ಆಯಿಲ್ ಮಿಲ್ ರಸ್ತೆ ಅರ್ಬನ ವಾರ್ಡ ನಂ.23,ಗಜೇಂದ್ರಗಡ ಪಟ್ಟಣದ ಜವಳಿ ಪ್ಲಾಟ ವಾರ್ಡ ನಂ.21, ತಾಲೂಕಿನ ಬೇವಿನಕಟ್ಟಿ ಗ್ರಾಮದ ವಾರ್ಡ ನಂ.1,ರೋಣ ತಾಲೂಕಿನ ಹಿರೇಹಾಳ ಗ್ರಾಮದ ವಾರ್ಡ ನಂ.4, ಮಲವಾಡ ಸ್ಥಳಾಂತರ ಗ್ರಾಮ, ಮುಂಡರಗಿ ಪಟ್ಟಣದ ಅನ್ನದಾನೇಶ್ವರ ನಗರ ವಾರ್ಡ ನಂ.7,ತಾಲೂಕಿನ ಕದಾಂಪುರ ಗ್ರಾಮದ ವಾರ್ಡ ನಂ.2, ಗದಗ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ವರದಿಯನ್ವಯ ಈ 42 ಪ್ರದೇಶಗಳನ್ನು ಕೊವಿಡ್–19 ಸೋಂಕು ನಿಯಂತ್ರಣ ಪ್ರತಿಬಂಧಿತ (ಕಂಟೇನ್‌ಮೆಂಟ್) ಪ್ರದೇಶಗಳೆಂದು ಘೋಷಿಸಿರುವುದನ್ನು ಹಿಂಪಡೆದು ತಕ್ಷಣದಿಂದ ಸಾಮಾನ್ಯ ವಲಯವಾಗಿ ಬದಲಾವಣೆಗೊಳಿಸಿ ಗದಗ ಜಿಲ್ಲಾಧಿಕಾರಿ ಮತ್ತು ಜಿಲ್ಲಾ ದಂಡಾಧಿಕಾರಿ ಎಂ. ಸುಂದರೇಶ್ ಬಾಬು ಆದೇಶ ಹೊರಡಿಸಿದ್ದಾರೆ.

ಆನ್‌ಲೈನ್ ಮೂಲಕ ಅರ್ಜಿ ಆಹ್ವಾನ

ಗದಗ.ಆ.10 : 2020–21ನೇ ಶೈಕ್ಷಣಿಕ ಸಾಲಿಗೆ ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಯ ವತಿಯಿಂದ ರಾಜ್ಯದ ಎಲ್ಲಾ ಸರ್ಕಾರಿ ಹಾಗೂ ಅನುದಾನಿತ ಪಾಲಿಟೆಕ್ನಿಕ್‌ಗಳಲ್ಲಿ ಪ್ರಥಮ ಡಿಪ್ಲೋಮಾ ಪ್ರವೇಶಾತಿಯನ್ನು ಆನ್‌ಲೈನ್ ನಾನ್–ಇಂಟರಾಕ್ಟೀವ್ ಕೌನ್ಸಲಿಂಗ್ (ಆನ್‌ಲೈನ್ ಆಪ್ಷನ್ ಎಂಟ್ರಿ) ಮೂಲಕ ನಡೆಸಲು ಅರ್ಹ ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಪ್ರಥಮ ಡಿಪ್ಲೋಮಾ ಪ್ರವೇಶ ಬಯಸುವ ಅರ್ಹ ಅಭ್ಯರ್ಥಿಗಳು ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಯ ಮತ್ತು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವೆಬ್‌ಸೈಟ್ **https://dtetech.karnataka.gov.in/kartechnical** ಮತ್ತು **www.cetonline.karnataka.gov.in/kea/**ಗಳಲ್ಲಿ ಮಾಹಿತಿ ಪುಸ್ತಕವನ್ನು ಡೌನಲೋಡ್ ಮಾಡಿಕೊಂಡು,ಆನ್‌ಲೈನ್ ಮೂಲಕ ಅರ್ಜಿಯನ್ನು ಹಾಗೂ ತಮ್ಮ ಇಚ್ಛೆಗನುಗುಣವಾಗಿ ಕಾಲೇಜು/ಕೋರ್ಸ್ ಆಯ್ಕೆಯನ್ನು ದಾಖಲಿಸಬಹುದಾಗಿದೆ. ಆನ್‌ಲೈನ್‌ನಲ್ಲಿ ಸಲ್ಲಿಸಿದ ಅರ್ಜಿಯನ್ನು ಮತ್ತು ಆಪ್ಷನ್ ಎಂಟ್ರಿ ದಾಖಲಿಸಿದ ನಂತರ ಪ್ರಿಂಟ್ ಪಡೆದುಕೊಳ್ಳಬೇಕು. ಅಥವಾ ಹತ್ತಿರದ ಯಾವುದೇ ಸರ್ಕಾರಿ/ ಅನುದಾನಿತ ಪಾಲಿಟೆಕ್ನಿಕ್ ಸಂಸ್ಥೆಯ “ಸಹಾಯ ಕೇಂದ್ರ”ದಲ್ಲಿ ಉಪನ್ಯಾಸಕರ ಸಹಕಾರದೊಂದಿಗೆ ಆನ್‌ಲೈನ್ ಅರ್ಜಿಯನ್ನು ಸಲ್ಲಿಸಬಹುದಾಗಿದೆ. ಅಗಸ್ಟ 22 ಅರ್ಜಿ ಸಲ್ಲಿಸಲು ಕೊನೆಯ ದಿನಾಂಕವಾಗಿರುತ್ತದೆ.

ಗಜೇಂದ್ರಗಡ ಸರ್ಕಾರಿ ಪಾಲಿಟೆಕ್ನಿಕ್ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನ

ಗದಗ.ಆ.10 : ಗಜೇಂದ್ರಗಡ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜಿನಲ್ಲಿ 2020–21 ನೇ ಸಾಲಿಗೆ ಪ್ರಥಮ ಸೆಮಿಸ್ಟರ್ ಡಿಪ್ಲೋಮಾ ಇಂಜನೀಯರಿಂಗ್ ಪ್ರವೇಶಕ್ಕೆ ಆನ್‌ಲೈನ್ ಮೂಲಕ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಇಚ್ಛಿಸುವ ಅಭ್ಯರ್ಥಿಗಳು ಎಸ್.ಎಸ್.ಎಲ್.ಸಿ./ ತತ್ಸಮಾನ ಪರೀಕ್ಷೆಯಲ್ಲಿ ಶೇ. 35 % ಅಂಕಗಳೊಂದಿಗೆ ಉತ್ತೀರ್ಣರಾಗಿರಬೇಕು. ಸಿವಿಲ್ ಇಂಜನೀಯರಿಂಗ್, ಮೆಕ್ಯಾನಿಕಲ್ ಇಂಜನೀಯರಿಂಗ್ ಇ ಮತ್ತು ಸಿ ಇಂಜನೀಯರಿಂಗ್ ಮತ್ತು ಗಣಕಯಂತ್ರ ವಿಭಾಗಗಳಿದ್ದು, ಗುಣಮಟ್ಟದ ತಾಂತ್ರಿಕ ಶಿಕ್ಷಣವನ್ನು ಬೋಧಿಸಲಾಗುತ್ತದೆ. ಆಸಕ್ತರು **https://dtetech.karnataka.gov.in/kartechnical/ or https://cetonline://cetonline.karnataka.gov.inkea/**ವೆಬ್‌ಸೈಟ್‌ನಲ್ಲಿ ಮೂಲದಾಖಲೆಗಳೊಂದಿಗೆ ಅಗಸ್ಟ 22 ರವರೆಗೆ ಆನ್‌ಲೈನ್ ಮುಖಾಂತರ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಪ್ರಾಚಾರ್ಯರು, ಸರ್ಕಾರಿ ಪಾಲಿಟೆಕ್ನಿಕ್ , ಗಜೇಂದ್ರಗಡ ಮೊ ಸಂಖ್ಯೆ 9902609406 / 9900906160 ಸಂಪರ್ಕಿಸಬಹುದಾಗಿದೆ.

ಸ್ವಾತಂತ್ರ್ಯ ದಿನಾಚರಣೆಗೆ ಸಕಲ ಸಿದ್ಧತೆಗೆ ಸೂಚನೆ:ಜಿಲ್ಲಾಧಿಕಾರಿ

(1ನೇ ಪುಟದಿಂದ)

ವಿದ್ಯುತ್ ದೀಪಾಲಂಕಾರ ಮಾಡಬೇಕು. ಧ್ವಜಾರೋಹಣ ಸಂದರ್ಭದಲ್ಲಿ ವ್ಯತಿರಿಕ್ತ ಘಟನೆಗಳು ಸಂಭವಿಸದಂತೆ ನಿಗಾವಹಿಸಬೇಕು.ಈ ಸಂದರ್ಭದಲ್ಲಿ ಸಚಿವರ ಸಂದೇಶ, ಸಾಧಕರಿಗೆ ಸನ್ಮಾನ, ಆಮಂತ್ರಣ ಪತ್ರಿಕೆ ಮುದ್ರಣ, ವೇದಿಕೆ ನಿರ್ಮಾಣ, ಬಂದೋಬಸ್ತ್, ಶಾಮಿಯಾನ ವ್ಯವಸ್ಥೆ ಹಾಗೂ ಉಪಹಾರ ವ್ಯವಸ್ಥೆಗಳನ್ನು ಶಿಷ್ಟಾಚಾರ ಮಾರ್ಗಸೂಚಿಗಳಂತೆ ನಿರ್ವಹಿಸಲು ಜಿಲ್ಲಾಧಿಕಾರಿ ಎಂ.ಸುಂದರೇ ಶ್‌ಬಾಬು ಸೂಚಿಸಿದರು. ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾ ಹಣಾಧಿಕಾರಿ ಡಾ.ಆನಂದ್‌ಕೆ.,ಅಪರ ಜಿಲ್ಲಾಧಿಕಾರಿ ಸತೀಶ್‌ಕುಮಾರ್ ಎಂ., ಉಪವಿಭಾಗಾಧಿಕಾರಿ ರಾಯಪ್ಪ ಹುಣಸಗಿ, ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಸಭೆಯಲ್ಲಿ ಹಾಜರಿದ್ದರು.

ಪ್ರವಾಹ ನೆರವಿಗೆ 4 ಸಾವಿರ ಕೋಟಿ ವಿಶೇಷ ಆರ್ಥಿಕ ನರವು ನೀಡಲು ರಾಜ್ಯ ಸರ್ಕಾರ ಕೇಂದ್ರಕ್ಕೆ ಮನವಿ

(1ನೇ ಪುಟದಿಂದ)

ಕುಸಿದು ಬಿದ್ದಿದ್ದರೆ 5 ಲಕ್ಷ, ಭಾಗಶಃ ಕುಸಿದಿದ್ದರೆ 3 ಲಕ್ಷ, ಪಾತ್ರೆಗಳು, ದಿನಬಳಕೆಯ ವಸ್ತುಗಳು ನಾಶವಾಗಿದ್ದರೆ 10 ಸಾವಿರ ಪರಿಹಾರವನ್ನು ನೀಡುತ್ತಿದ್ದೇವೆ. ದೇಶದ ಯಾವುದೇ ರಾಜ್ಯಗಳಲ್ಲೂ ಇಷ್ಟು ದೊಡ್ಡ ಮಟ್ಟದ ಪರಿಹಾರವನ್ನು ನೀಡುತ್ತಿಲ್ಲ ಎಂದು ಬೊಮ್ಮಾಯಿ ಸಮರ್ಥಿಸಿಕೊಂಡರು. ರಕ್ಷಣಾ ಕಾರ್ಯದಲ್ಲಿ ತೊಡಗಿಸಿಕೊಳ್ಳಲು ಭಾರತೀಯ ವಾಯುಪಡೆಗೆ ಸೇರಿದ ನಾಲ್ಕು ಹೆಲಿಕಾಪ್ಟರ್ಗಳನ್ನುಮೀಸಲಿಡಲಾಗಿದೆ. ಅಲ್ಲದೆ ಅಗತ್ಯವಿರುವ ಕಡೆ ಇವುಗಳನ್ನು ಬಳಸಿಕೊಳ್ಳಲು ಜಿಲ್ಲಾಡಳಿತಕ್ಕೆ ಸೂಚನೆ ಕೊಡಲಾಗಿದೆ. ಒಂದು ತಿಂಗಳು ಮುಂಚಿತವಾಗಿಯೇ ರಾಜ್ಯಕ್ಕೆ ಎನ್‌ಡಿಆರ್‌ಎಫ್ ತಂಡ ಆಗಮಿಸಿದ್ದು, ರಕ್ಷಣಾ ಕಾರ್ಯದಲ್ಲಿ ತೊಡಗಿಸಿದೆ. ಸರ್ಕಾರದ ಮನವಿ ಮೇರೆಗೆ ಸೇನಾಪಡೆಯು ಆಗಮಿಸಿದೆ. ಅಗತ್ಯವಿರುವ ಕಡೆ ಇವರನ್ನು ನಿಯೋಜನೆ ಮಾಡಿಕೊಳ್ಳುವಂತೆ ಜಿಲ್ಲಾಕಾರಿಗಳಿಗೆ ಸೂಚಿಸಿದ್ದೇವೆ.

ರಕ್ಷಣಾ ಕಾರ್ಯ ಚುರುಕುಗೊಂಡಿದೆ. ಮುಖ್ಯಮಂತ್ರಿ ಯಡಿಯೂರಪ್ಪನವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರೂ ಪ್ರತಿ ಗಂಟೆಗೊಮ್ಮೆ ಇಂಚಿಂಚು ಮಾಹಿತಿ ಪಡೆಯುತ್ತಿದ್ದಾರೆ ಎಂದರು.ಜಿಲ್ಲಾ ಉಸ್ತುವಾರಿ ಸಚಿವರು ಆಯಾ ಜಿಲ್ಲೆಗಳಲ್ಲಿ ವಾಸ್ತವ್ಯ ಹೂಡುವಂತೆ ಮುಖ್ಯಮಂತ್ರಿ ಅವರು ಸೂಚನೆ ಕೊಟ್ಟಿದ್ದಾರೆ. ಸರ್ಕಾರ ಸಮಾರೋಪಾದಿಯಲ್ಲಿ ಪರಿಹಾರವನ್ನು ಕೈಗೊಂಡಿದೆ. ನದಿಪಾತ್ರದ ಜನರು ಸುರಕ್ಷಿತ ಸ್ಥಳಗಳಿಗೆ ತೆರಳಬೇಕು. ಜಿಲ್ಲಾಡಳಿತ ನೀಡುವ ಸೂಚನೆಯನ್ನು ಕಟ್ಟುನಿಟ್ಟಾಗಿ ಪಾಲನೆ ಮಾಡಬೇಕೆಂದು ಸಲಹೆ ಮಾಡಿದರು.

15 ನಿಮಿಷಗಳ ಕಾಲ ನಡೆದ ವಿಡಿಯೋ ಕಾನರೆನ್ಸ್‌ನಲ್ಲಿ ಪ್ರಧಾನ ಅವರಿಗೆ ಸಚಿವರಾದ ಬೊಮ್ಮಾಯಿ, ಆರ್.ಅಶೋಕ್ ಹಾಗೂ ಸರ್ಕಾರದ ಮುಖ್ಯ ಕಾರ್ಯದರ್ಶಿ ಅವರು 12 ಜಿಲ್ಲೆಗಳಲ್ಲಿ ಮಳೆಯಿಂದ ಉಂಟಾಗಿರುವ ನೆರೆ, ಮನೆಗಳ ಕುಸಿತ, ಬೆಳೆಗಳು, ಜಾನುವಾರುಗಳು ಕೊಚ್ಚಿಹೋಗಿರುವುದು, ಸಾವು ಸೇರಿದಂತೆ ಪ್ರತಿಯೊಂದನ್ನು ಅಂಕಿಅಂಶಗಳ ಸಹಿತ ಪ್ರಧಾನಗೆ ಮನವರಿಕೆ ಮಾಡಿದರು.

ರಾಜ್ಯ ಸರ್ಕಾರದ ಮನವಿಗೆ ಸಕಾರಾತ್ಮಕವಾಗಿ ಸ್ಪಂದಿಸಿದ್ದ ಮೋದಿ ಅವರು ತಕ್ಷಣವೇ ನೆರೆ ಪರಿಹಾರ ಬಿಡುಗಡೆ ಮಾಡುವ ಸಂಬಂಧ ಸ್ಪಷ್ಟ ಭರವಸೆ ನೀಡಲಿಲ್ಲ. ಆದರೆ ಕರ್ನಾಟಕಕ್ಕೆ ಅಧ್ಯಯನ ತಂಡ ಹಾಗೂ ನಾಲ್ಕು ಎನ್‌ಡಿಆರ್‌ಎಫ್ ತಂಡ ಸೇರಿದಂತೆ ಮತ್ತಿತರ ಸೌಲಭ್ಯಗಳನ್ನು ಒದಗಿಸಿಕೊಡುವ ಆಶ್ವಾಸನೆ ನೀಡಿದರು.ಮಹಾಮಳೆಯಿಂದ 13 ಜನ ಪ್ರಾಣ ಕಳೆದುಕೊಂಡಿದ್ದಾರೆ. ಲೋಕೋಪಯೋಗಿ ಇಲಾಖೆಗೆ ಸೇರಿದ ಸಾವಿರಾರು ಕಿ.ಮೀ ರಸ್ತೆ, ವಿದ್ಯುತ್ ಕಂಬಗಳು, ಸೇತುವೆಗಳು, ಕೆರೆಕಟ್ಟೆಗಳು, ಹಳ್ಳಕೊಳ್ಳಗಳು ನಾಶವಾಗಿವೆ. ಪ್ರಾಥಮಿಕ ಅಂದಾಜಿನ ಪ್ರಕಾರ 4000 ಕೋಟಿಗೂ ಹೆಚ್ಚು ನಷ್ಟ ಸಂಭವಿಸಿದೆ. ಇದರ ಪ್ರಮಾಣ ಇನ್ನು ಹೆಚ್ಚಾಗುವ ಸಾಧ್ಯತೆ ಇರುವುದರಿಂದ ತಕ್ಷಣವೇ ಮುಂಗಡ ಪರಿಹಾರವನ್ನು ನೀಡಬೇಕೆಂದು ಕೋರಿದರು.

ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಕಡಲಕೊರೆತ ಉಂಟಾಗಿ ಭಾರೀ ಪ್ರಮಾಣದ ನಷ್ಟ ಸಂಭವಿಸಿದೆ. ರೈತರು ಎಲ್ಲವನ್ನೂ ಕಳೆದುಕೊಂಡು ಸಂಕಷ್ಟ ಸ್ಥಿತಿಗೆ ಸಿಲುಕಿದ್ದಾರೆ. ರಾಜ್ಯ ಸರ್ಕಾರ ತನ್ನ ಇತಿಮಿತಿಯಲ್ಲಿ ಸಂತ್ರಸ್ತರಿಗೆ ಸ್ಪಂದಿಸುವ ಕೆಲಸ ಮಾಡಿದೆ.

ಮಳೆ ಹಾನಿಗೊಳಗಾದ ಜಿಲ್ಲೆಗಳಿಗೆ ತತ್‌ಕ್ಷಣವಾಗಿ ಐದು ಕೋಟಿ ಸೇರಿದಂತೆ ಒಟ್ಟು 50 ಕೋಟಿ ಹಣವನ್ನು ಬಿಡುಗಡೆ ಮಾಡಿದ್ದೇವೆ. ಪರಿಹಾರ ಕಾರ್ಯ ಕೈಗೊಳ್ಳಲಾಗಿದೆ ಎಂದು ವಸ್ತುಸ್ಥಿತಿಯನ್ನು ವಿವರಿಸಿದರು. ಪ್ರತ್ಯೇಕ ತಂಡ ಕಳುಹಿಸಿ: ಮುಖ್ಯವಾಗಿ ಕಳೆದ ಬಾರಿಯಂತೆ ಈ ಬಾರಿಯೂ ಕೃಷ್ಣಕೊಳ್ಳದ ಪ್ರದೇಶಗಳಲ್ಲಿ ಭಾರೀ ಪ್ರಮಾಣದ ಹಾನಿ ಸಂಭವಿಸಿದೆ.ಹೀಗಾಗಿ ಕೃಷ್ಣನದಿಯು ಕರ್ನಾಟಕ, ಮಹಾರಾಷ್ಟ್ರ ಮತ್ತು ಆಂಧ್ರಪ್ರದೇಶಗಳಲ್ಲಿ ಹರಿಯುತ್ತಿರುವುದರಿಂದ ಈ ಮೂರು ರಾಜ್ಯಗಳಿಗೂ ಪ್ರತ್ಯೇಕವಾದ ಅಧ್ಯಯನ ತಂಡವನ್ನು ಕಳುಹಿಸಿಕೊಡಬೇಕೆಂದು ಮನವಿ ಮಾಡಿದರು.ಜತೆಗೆ ಪಶ್ಚಿಮಘಟ್ಟ , ಕೃಷ್ಣ ಜಲಾನಯನ, ಕಾವೇರಿ ಜಲಾನಯನ ಮತ್ತು ಕಾವೇರಿ ಜಲಾನಯನ ಹಾಗೂ ಕರಾವಳಿ ಭಾಗಕ್ಕೆ ಪ್ರತ್ಯೇಕವಾದ ಅಧ್ಯಯನ ತಂಡವನ್ನು ತಕ್ಷಣವೇ ಕಳುಹಿಸಿಕೊಡಬೇಕೆಂಬ ಬೇಡಿಕೆಯನ್ನಿಟ್ಟರು.

ಪರಿಹಾರ ಕಾರ್ಯವನ್ನು ಚುರುಕುಗೊಳಿಸಲು ನಾಲ್ಕು ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆ(ಎನ್‌ಡಿಆರ್‌ಎಫ್)ಯನ್ನು ಕಳುಹಿಸಿಕೊಡುವಂತೆಯೂ ಸರ್ಕಾರ ಮನವಿ ಮಾಡಿದೆ. ಅಧ್ಯಯನ ತಂಡ ಕೇಂದ್ರಕ್ಕೆ ವರದಿ ನೀಡಿದ ನಂತರ ಪರಿಹಾರವನ್ನು ಬಿಡುಗಡೆ ಮಾಡುವ ಆಶ್ವಾಸನೆಯನ್ನು ಕೊಟ್ಟರು.

ಎಸ್ಸೆಸ್ಸೆಲ್ಸಿ ಫಲಿತಾಂಶ:ಬಳ್ಳಾರಿಗೆ 13ನೇ ಸ್ಥಾನ

ಬಳ್ಳಾರಿ,ಆ.–: ಮಹಾಮಾರಿ ಕೊರೊನಾ ಮಧ್ಯೆ ಸಕಲ ಸಿದ್ಧತೆಗಳೊಂದಿಗೆ ರಾಜ್ಯದಲ್ಲಿ ನಡೆದಿದ್ದ ಎಸ್ಸೆಸ್ಸೆಲ್ಸಿ ಫಲಿತಾಂಶ ಸೋಮವಾರ ಮಧ್ಯಾಹ್ನ ಪ್ರಕಟವಾಗಿದ್ದು, ಬಳ್ಳಾರಿ ಜಿಲ್ಲೆ 13ನೇ ಸ್ಥಾನ ಪಡೆದಿದೆ.2018–19ನೇ ಸಾಲಿನಲ್ಲಿ 23ನೇ ಸ್ಥಾನದಲ್ಲಿದ್ದ ಬಳ್ಳಾರಿ ಜಿಲ್ಲೆ ಈ ಬಾರಿ 13ನೇ ಸ್ಥಾನಕ್ಕೇರಿರುವುದು ವಿಶೇಷ. 41683 ವಿದ್ಯಾರ್ಥಿಗಳು ಜಿಲ್ಲೆಯಲ್ಲಿ ಪರೀಕ್ಷೆಗೆ ಹಾಜರಾಗಿದ್ದರು.ಜಿಲ್ಲಾ ರ್‍ಯಾಂಕಿಂಗ್‌ನಲ್ಲಿ ಬಳ್ಳಾರಿ 13ನೇ ಸ್ಥಾನ ಪಡೆದುಕೊಂಡಿದ್ದು, ಇದೇ ಮೊದಲ ಬಾರಿಗೆ ಶಿಕ್ಷಣ ಇಲಾಖೆ ನಡೆಸಿದ ಗ್ರೇಡ್‌ಗಳ(ಎ,ಬಿ ಮತ್ತು ಸಿ)ಲ್ಲಿ ಬಿ ಗ್ರೇಡ್‌ನಲ್ಲಿ 3ನೇ ಸ್ಥಾನ ಪಡೆದುಕೊಂಡಿದೆ. ಹರಪನಳ್ಳಿ,ಕೂಡ್ಲಿಗಿ,ಹಡಗಲಿ ಮತ್ತು ಸಂಡೂರು ಫಲಿತಾಂಶದಲ್ಲಿ ಎ ಗ್ರೇಡ್ ಪಡೆದುಕೊಂಡಿವೆ. ಸಿರಗುಪ್ಪ, ಬಳ್ಳಾರಿ,ಕುರುಗೋಡು, ಹೊಸಪೇಟೆ,ಹಗರಿಬೊಮ್ಮನಹಳ್ಳಿ ತಾಲೂಕುಗಳು ಬಿ ಗ್ರೇಡ್ ಪಡೆದುಕೊಂಡಿವೆ. ಬಳ್ಳಾರಿ ಪೂರ್ವ ವಲಯ ಮಾತ್ರ ಸಿ ಗ್ರೇಡ್ ಪಡೆದುಕೊಂಡಿದೆ; ಬಳ್ಳಾರಿ ಪೂರ್ವ ವಲಯದ ಫಲಿತಾಂಶ ಇನ್ನಷ್ಟು ಉತ್ತಮವಾಗಿರುತ್ತಿದ್ದಲ್ಲಿ ನಮ್ಮ ಜಿಲ್ಲೆ ಎ ಗ್ರೇಡ್ ಫಲಿತಾಂಶದ ಮೂಲಕ ಜಿಲ್ಲಾಮಟ್ಟದಲ್ಲಿ ರ್‍ಯಾಂಕಿಂಗ್‌ನಲ್ಲಿ ಇನ್ನಷ್ಟು ಮೇಲಿರುತ್ತಿತ್ತು ಎಂದು ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕ ರಾಮಪ್ಪ ಅವರು ತಿಳಿಸಿದ್ದಾರೆ.ಈ ರೀತಿಯ ಉತ್ತಮ ಫಲಿತಾಂಶ ಬರಲು ಎಲ್ಲ ಶಿಕ್ಷಕರ ಶ್ರಮ,ವಿದ್ಯಾರ್ಥಿಗಳ ಪರಿಶ್ರಮ,ಪೋಷಕರ ಬೆಂಬಲ ಬಹಳ ಮುಖ್ಯವಾಗಿದ್ದು,ಜಿಲ್ಲಾಡಳಿತ,ಜಿಲ್ಲಾ ಪಂಚಾಯಿತಿ, ಎಲ್ಲ ಜನಪ್ರತಿನಿಧಿಗಳಿಗೆ,ಸಾರ್ವಜನಿಕರಿಗೆ,ಶಿಕ್ಷಕ ವರ್ಗದವರಿಗೆ ಡಿಡಿಪಿಐ ರಾಮಪ್ಪ ಅವರು ಅಭಿನಂದನೆಗಳನ್ನು ಸಲ್ಲಿಸಿದ್ದಾರೆ.

ಆಂಗ್ಲ ಮಾಧ್ಯಮ ಶಾಲೆಯ ವಿದ್ಯಾರ್ಥಿಗಳು ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 91.76 ಫಲಿತಾಂಶ

ಗೋಕಾಕ: ಇಲ್ಲಿಯ ಮಯೂರ ಆಂಗ್ಲ ಮಾಧ್ಯಮ ಶಾಲೆಯ ವಿದ್ಯಾರ್ಥಿಗಳು ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 91.76 ಫಲಿತಾಂಶವನ್ನು ಪಡೆಯುವ ಮೂಲಕ ಉತ್ತಮ ಸಾಧನೆಯನ್ನು ಮಾಡಿದ್ದಾರೆ.ಅತ್ಯುತ್ತಮ ಶ್ರೇಣಿಯಲ್ಲಿ 28 ವಿದ್ಯಾರ್ಥಿಗಳು, ಪ್ರಥಮ ದರ್ಜೆಯಲ್ಲಿ 38 ವಿದ್ಯಾರ್ಥಿಗಳು, ದ್ವಿತಿಯ ದರ್ಜೆಯಲ್ಲಿ 12 ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ.ಮನಾಲಿ ಕಿತ್ತೂರ 602(96.32) ಶಾಲೆಗೆ ಪ್ರಥಮ, ಪ್ರತೀಕ್ಷಾ ಯರಗಟ್ಟಿ 595(95.20) ದ್ವಿತೀಯ, ಗೌರಿಶ್ರೀ ಆರ್, 592(94.72) ತೃತೀಯ, ಅಕ್ಷಯ ಕಬ್ಬೂರಮಠ 591(94.56) ನಾಲ್ಕನೇ ಸ್ಥಾನ, ಸಂದೇಶ ತೂರಡಗಿ 589(94.24) ಐದನೇ ಸ್ಥಾನ ಪಡೆದಿದ್ದಾರೆ.ವಿದ್ಯಾರ್ಥಿಗಳ ಈ ಸಾಧನೆಗೆ ಸಂಸ್ಥೆಯ ಚೇರಮನ್ ಲಖನ ಜಾರಕಿಹೊಳಿ, ಆಡಳಿತ ಮಂಡಳಿಯ ಸದಸ್ಯರು, ಮುಖ್ಯೋಪಾದ್ಯಾಯಿನಿ ಸಿ.ಬಿ.ಪಾಗದ ಹಾಗೂ ಶಿಕ್ಷಕರು ಸಿಬ್ಬಂದಿಯವರು ಅಭಿನಂದಿಸಿದ್ದಾರೆ.

ಎಸ್‌ಎಸ್‌ಎಲ್ ಸಿ ಫಲಿತಾಂಶ ಪ್ರಕಟ: ಶೇ.71.80 ವಿದ್ಯಾರ್ಥಿಗಳು ಉತ್ತೀರ್ಣ, ಚಿಕ್ಕಬಳ್ಳಾಪುರಕ್ಕೆ ಪ್ರಥಮ ಸ್ಥಾನ

(1ನೇ ಪುಟದಿಂದ)

ರಾಜ್ಯಾದ್ಯಂತ 8, 48, 203 ವಿದ್ಯಾರ್ಥಿಗಳು ಪರೀಕ್ಷೆ ನೋಂದಾಯಿಸಿಕೊಂಡಿದ್ದು, ಈ ಪೈಕಿ 8,11,050 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು. 19, 086 ವಿದ್ಯಾರ್ಥಿಗಳ ಕೊರತೆಯುಂಟಾಗಿತ್ತು. ರಾಜ್ಯಾದ್ಯಂತ 34 ಶೈಕ್ಷಣಿಕ ಜಿಲ್ಲೆಗಳ 22 ಕೇಂದ್ರಗಳಲ್ಲಿ ಮೌಲ್ಯಮಾಪನ ಮಾಡಲಾಗಿತ್ತು ಎಂದು ಹೇಳಿದರು. ಕೊರೊನಾ ಸೋಂಕಿನ ಭೀತಿಯಿಂದ 18,067 ವಿದ್ಯಾರ್ಥಿಗಳು ಮೊದಲು ಪರೀಕ್ಷೆ ಬರೆಯದೆ, ಪೂರಕ ಪರೀಕ್ಷೆಗೆ ಹಾಜರಾಗಿದ್ದರು. 227 ಮೌಲ್ಯಮಾಪನ ಕೇಂದ್ರಗಳಲ್ಲಿ ಮೌಲ್ಯಮಾಪನ ನಡೆಯಿತು. 52,219 ಮೌಲ್ಯಮಾಪಕರು ಉತ್ತರಪತ್ರಿಕೆಗಳ ಮೌಲ್ಯಮಾಪನ ಮಾಡಿದ್ದಾರೆ ಎಂದು ಮಾಹಿತಿ ನೀಡಿದರು.

ಈ ವರ್ಷ ಶೇ.71.80 ಮಂದಿ ಅಂದರೆ 5, 82, 314 ಮಂದಿ ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು, ಕಳೆದ ವರ್ಷ 73.70 ಮಂದಿ ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದರು. ಈ ಬಾರಿ ಚಿಕ್ಕಬಳ್ಳಾಪುರ ಜಿಲ್ಲೆಗೆ ಪ್ರಥಮ ಸ್ಥಾನ ಲಭಿಸಿದ್ದು, ಬೆಂಗಳೂರು ಗ್ರಾಮಾಂತರ ದ್ವಿತೀಯ ಮಧುಗಿರಿ ತೃತೀಯ, ಮಂಡ್ಯ ಜಿಲ್ಲೆಗೆ ನಾಲ್ಕನೇ ಸ್ಥಾನ ಲಭಿಸಿದೆ. ಯಾದಗಿರಿ ಕೊನೆಯ ಸ್ಥಾನ ಲಭಿಸಿದೆ. 2, 28, 734 ವಿದ್ಯಾರ್ಥಿಗಳು ಅನುತೀರ್ಣರಾಗಿದ್ದಾರೆ.

ಈ ಪೈಕಿ ಸರ್ಕಾರಿ ಶಾಲೆಗಳ ಶೇ.72.79 ಮಂದಿ ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು, ಅನುದಾನತ ಶಾಲೆಗಳ ಶೇ. 70.60 ಮಂದಿ ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಅನುದಾನ ರಹಿತ ಶಾಲೆಗಳ ಶೇ.83.12ಮಂದಿ ವಿದ್ಯಾರ್ಥಿಗಲು ಉತ್ತೀರ್ಣರಾಗಿದ್ದಾರೆ.

ಪ್ರತೀ ಬಾರಿಯಂತೆಯೂ ಈ ಬಾರಿಯೂ ಬಾಲಕಿಯರದ್ದೇ ಮೇಲುಗೈ ಸಾಧಿಸಿದ್ದಾರೆ. ಈ ಬಾರಿ ಶೇ.66.41 ಬಾಲಕರು ಉತ್ತೀರ್ಣರಾಗಿದ್ದು, ಶೇ.77.74ರಷ್ಟು ಬಾಲಕಿಯರು ಉತ್ತೀರ್ಣರಾಗಿದ್ದಾರೆ. 6 ಮಂದಿ ವಿದ್ಯಾರ್ಥಿಗಳು 625ಕ್ಕೆ 625 ಅಂಕಗಳನ್ನು ಗಳಿಸಿದ್ದು, ಕಳೆದ ಬಾರಿ ಇಬ್ಬರು ಮಾತ್ರ ಈ ಸಾಧನೆ ಗೈದಿದ್ದರು.ಅಂತೆಯೇ ಈ ಬಾರಿ 11 ಮಂದಿ 625ಕ್ಕೆ 624 ಅಂಕಗಳನ್ನು ಪಡೆದಿದ್ದು, ಕಳೆದ ಬಾರಿ 11 ಇಷ್ಟು ಅಂಕಗಳಿಸಿದ್ದರು. ಇನ್ನು ನಗರ ಪ್ರದೇಶದಲ್ಲಿ ಶೇ.73.41 ರಷ್ಟು ಮಂದಿ ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು, ಗ್ರಾಮೀಣ ಭಾಗದ ಶೇ.77.18 ಮಂದಿ ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಅಂತೆಯೇ ಕನ್ನಡ ಮಾಧ್ಯಮದ ಶೇ. 70.49 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು. ಆಂಗ್ಲ ಮಾಧ್ಯಮದ ಶೇ.84.98 ಮಂದಿ ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ವಿದ್ಯಾರ್ಥಿಗಳಿಗೆ ಎಸ್‌ಎಂಎಸ್ ಮೂಲಕ ಫಲಿತಾಂಶದ ಸಂದೇಶ ಕಳುಹಿಸಲಾಗುತ್ತದೆ, ಮಂಗಳವಾರ ಬೆಳಿಗ್ಗೆ ಆಯಾ ಶಾಲೆಗಳಲ್ಲಿ ಫಲಿತಾಂಶ ನೋಡಬಹುದು. **http://kseeb.kar.nic.in** ಮತ್ತು **http:/karresults.kar.nic.in** ನಲ್ಲಿ ಫಲಿತಾಂಶ ಪ್ರಕಟವಾಗಲಿದೆ.

ಸಣ್ಣ ಉದ್ಯಮಿಗಳ ಹಿತ ಕಾಯಲು ಬದ್ಧ : ನಿರ್ಮಲಾ ಸೀತಾರಾಮನ್

(1ನೇ ಪುಟದಿಂದ)

ರಫ್ತು ಮಾಡಲು ಅವಕಾಶ ನೀಡಿರುವುದರಿಂದ ವಿಶೇಷವಾಗಿ ಸಣ್ಣ ಕೈಗಾರಿಕೆಗಳಿಗೆ ಹೆಚ್ಚಿನ ಅನುಕೂಲವಾಗಲಿದೆ. ಸ್ವಾವಲಂಬಿ ಉದ್ಯಮಿಗಳು ಇನ್ನಷ್ಟು ಪ್ರಗತಿ ಸಾಸಲು ಸಾಧ್ಯವಾಗುತ್ತದೆ. ಇದಕ್ಕೆ ಉತ್ತೇಜನ ನೀಡಿದ ಪ್ರಧಾನ ಮೋದಿ ಅವರಿಗೆ ಎಫ್‌ಕೆಸಿಸಿಐ ವಿಶೇಷವಾಗಿ ಅಭಿನಂದನೆ ಸಲ್ಲಿಸುತ್ತದೆ ಎಂದು ಜನಾರ್ದನ್ ಹೇಳಿದ್ದಾರೆ.

ಇದೇ ವೇಳೆ ಹಣಕಾಸು ಸಚಿವರಿಗೆ ಪ್ರಸ್ತುತ ಮುದ್ರಣ ಮತ್ತು ಕಾಗದ ಕೈಗಾರಿಕೆಗಳು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಮನವರಿಕೆ ಮಾಡಿಕೊಡಲಾಗಿದೆ. ಕೇಂದ್ರ ಸರ್ಕಾರ ಆರ್ಥಿಕ ಮಿತವ್ಯಯದ ನೆಪದಲ್ಲಿ ಡೈರಿ, ಕ್ಯಾಲೆಂಡರ್‌ಗಳ ಪ್ರಕಟಣೆಗೆ ಕಡಿವಾಣ ಹಾಕಿದೆ. ಸರ್ಕಾರಿ ಸ್ವಾಮ್ಯದ ನಿಗಮ, ಮಂಡಳಿಗಳು, ವಿವಿಧ ಇಲಾಖೆಗಳು ಹಾಗೂ ಬ್ಯಾಂಕಿಂಗ್ ಸಂಸ್ಥೆಗಳು ಡೈರಿ, ಕ್ಯಾಲೆಂಡರ್ ಮುದ್ರಿಸಬಾರದು ಎಂದು ಕೇಂದ್ರ ಸರ್ಕಾರದ ಆರ್ಥಿಕ ಇಲಾಖೆ ಸುತ್ತೋಲೆ ಹೊರಡಿಸಿದೆ.

ಈ ಸುತ್ತೋಲೆಯಿಂದ ದೇಶಾದ್ಯಂತ 1700ಕ್ಕೂ ಹೆಚ್ಚು ಮುದ್ರಣ ಸಂಸ್ಥೆಗಳು ಆರ್ಥಿಕ ಸಂಕಷ್ಟಕ್ಕೆ ಸಿಲುಕಲಿವೆ. ಸುಮಾರು 4 ಲಕ್ಷ ಕುಟುಂಬಗಳು ತೊಂದರೆಗೀಡಾಗಲಿವೆ. ನಿರುದ್ಯೋಗ ಹೆಚ್ಚಾಗಲಿದೆ. ಡೈರಿ, ಕ್ಯಾಲೆಂಡರ್ ಮುದ್ರಣದಿಂದ ಸರ್ಕಾರಕ್ಕೆ ಮತ್ತು ಸಂಸ್ಥೆಗಳಿಗೆ ಹೆಚ್ಚಿನ ಆರ್ಥಿಕ ಹೊರೆಯಾಗುವುದಿಲ್ಲ.ಆದರೆ ನಿಯಂತ್ರಣ ಮಾಡಿದರೆ ಮುದ್ರಣ ಉದ್ಯಮದ ಮೇಲೆ ಕೆಟ್ಟ ಪರಿಣಾಮ ಬೀರಲಿದೆ. ಡೈರಿ, ಕ್ಯಾಲೆಂಡರ್‌ನಿಂದ ಏರ್ಪಡುವ ಬ್ರ್ಯಾಂಡಿಂಗ್ ಕೂಡ ನಷ್ಟವಾಗಲಿದೆ ಎಂದು ಜನಾರ್ದನ್ ಅವರು ಕೇಂದ್ರ ಸಚಿವರಿಗೆ ವಿವರಿಸಿದ್ದಾರೆ. ಇದಕ್ಕೆ ಸ್ಪಂದಿಸಿದ ನಿರ್ಮಲಾ ಸೀತಾರಾಮನ್ ಅವರು, ಕೇಂದ್ರ ಆರ್ಥಿಕ ಇಲಾಖೆ ಹೊರಡಿಸಿರುವ ಸುತ್ತೋಲೆಯನ್ನು ಮರು ಪರಿಶೀಲಿಸುವುದಾಗಿ ಭರವಸೆ ನೀಡಿದರು.

ಮುದ್ರಣ ಮತ್ತು ಕಾಗದ ವಲಯಕ್ಕೆ ಕೇಂದ್ರ ಸರ್ಕಾರ ಎಲ್ಲಾ ರೀತಿಯ ನೆರವು ನೀಡಲಿದೆ. ಉದ್ಯಮಿಗಳು ಆತಂಕಪಡುವ ಅಗತ್ಯ ಇಲ್ಲ ಎಂದು ತಮಗೆ ಭರವಸೆ ನೀಡಿದ್ದಾರೆ ಎಂದು ಜನಾರ್ದನ್ ತಿಳಿಸಿದ್ದಾರೆ.ಇತ್ತೀಚೆಗೆ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ವಲಯದ ಉದ್ಯಮಿಗಳು ಎದುರಿಸುತ್ತಿರುವ ಸಂಕಷ್ಟಗಳ ಕುರಿತಂತೆ ಈ ಸಂಜೆ ವಿಸ್ತೃತವಾದ ವರದಿಯನ್ನು ಪ್ರಕಟಿಸಿದ್ದನ್ನು ಸ್ಮರಿಸಬಹುದು.